# ಆಹಾ ಸುದ್ದಿ!

★ ಸಸಿತೋಟ

ಗುಜರಾತಿನ ಹಳ್ಳಿಯೊಂದರ ಕಾರ್ಮಿಕ ದಂಪತಿ ರಾಮ್‌ಸಿನ್ಹ ಮತ್ತು ಕಾನು 'ಹಮ್ ದೋ ಹಮಾರೆ 17' ಎಂಬ ಯುಗಳ ಗೀತೆ ಹಾಡುತ್ತಿದ್ದಾರಂತೆ. ಇವರಿಗೆ ಒಟ್ಟು 16 ಹೆಣ್ಣುಮಕ್ಕಳು ಹಾಗೂ ಏಕಮಾತ್ರ ಪುತ್ರನಂತೆ. ಗಂಡು ಮಗು ಬೇಕೆಂದು ಒಂದರ ಹಿಂದೆ ಒಂದರಂತೆ ಹೆಣ್ಣುಮಕ್ಕಳನ್ನು ಪಡೆದ ಈ ದಂಪತಿ ಗಂಡು ಮಗುವಾದ ನಂತರವೂ ಮತ್ತೆ ಮತ್ತೆ ಮಕ್ಕಳನ್ನು ಪಡೆಯುತ್ತ ಹೋದದ್ದು, ಈ ಹೆಣ್ಣುಮಕ್ಕಳನ್ನು ನೋಡಿಕೊಳ್ಳಲು ಇನ್ನೊಂದು ಗಂಡು ಮಗು ಬೇಕು ಎಂಬ ಆಸೆಯಿಂದ. ಸಂತಾನ ನಿಯಂತ್ರಣ ಶಸ್ತ್ರಚಿಕಿತ್ಸೆ ಮಾಡಿಕೊಳ್ಳಿ ಎಂದು ಗ್ರಾಮದವರು ಒತ್ತಾಯಿಸದಿದ್ದರೆ 'ಹಮ್ ದೋ ಹಮಾರೆ 18' ಆಗುತ್ತಿತ್ತು.



ಈತ ಮೆಕ್ಸಿಕೋದ ಮಾಂತ್ರಿಕ ಅಂಟೋನಿಯೊ. ಅಮೆರಿಕಾದ ಚುನಾಯಿತ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಮೇಲೆ ಆತನ ಭಾವಚಿತ್ರ ಇಟ್ಟುಕೊಂಡು ಮಾಟ ಮಾಡುತ್ತಿದ್ದಾನಂತೆ. ಅಮೆರಿಕಾ ಮತ್ತು ಮೆಕ್ಸಿಕೊ ಮಧ್ಯೆ ಗೋಡೆ ಕಟ್ಟುತ್ತೇನೆಂದು ಹೇಳಿದ ಟ್ರಂಪ್‌ಗೆ ಮಾಟ– ಮಂತ್ರದ ಗೋಡೆ ಹಾಕುವುದರ ಬದಲು ಗೋಡೆ ಮೇಲೆ ಹಾರಿ ಹೋಗುವ ಬಗೆಯನ್ನು ಇಂಪ್ರೂವ್ ಮಾಡಬಹುದಿತ್ತು ಈ ಭಯಂಕರ ಮಾಂತ್ರಿಕ.



ಟೆಕ್ಸಾಸ್‌ನ ವಿದ್ಯಾರ್ಥಿ ಸ್ಕೌಟ್ ನಾಯಕನೊಬ್ಬ ಅತ್ಯಂತ ಖಾರವಾದದ್ದು ಎಂದೇ ಖ್ಯಾತವಾದ ಒಟ್ಟು 23 ಘೋಸ್ಟ್ ಮೆಣಸಿಕಾಯಿಗಳನ್ನು ತಿಂದು ದಾಖಲೆ ಮಾಡಿದ್ದಾನಂತೆ. ಆತ ಸ್ಕೌಟ್ ತಂಡಕ್ಕೆ ಸಮವಸ್ತ್ರ ಖರೀದಿಸುವ ಸಲುವಾಗಿ ಈ ಸಾಹಸಕ್ಕೆ ಕೈ ಹಾಕಿದ್ದು, ಘೋಸ್ಟ್ ಹೊಟ್ಟೆಯೊಳಗೆ ಅಡಗಿಕೊಂಡು ವಾದ್ಯಗೋಷ್ಠಿ ನಡೆಸಲು ಆರಂಭಿಸಿತಂತೆ. ಸದ್ಯಕ್ಕಂತೂ ಆತ ಆಸ್ಪತ್ರೆ ಸಮವಸ್ತ್ರ ಧರಿಸಿ ಶೌಚಾಲಯಕ್ಕೆ ಮಾರ್ಚ್‌ಫಾಸ್ಟ್ ಮಾಡುತ್ತಿದ್ದಾನಂತೆ.



ಮಾಳು ಎಂಬ ಈ ನಾಯಿ ಶಬರಿಮಲೆಗೆ 600 ಕಿ.ಮೀ. ದೂರ ನಡೆದು ಶಹಬ್ಬಾಸ್ ಎನಿಸಿಕೊಂಡಿದೆ. ಕೇರಳದ ನವೀನ್ ಎಂಬಾತ ಕೊಲ್ಲೂರಿನಿಂದ ನಡಿಗೆ ಆರಂಭಿಸಿದರಂತೆ. ಸುಮಾರು 80 ಕಿ.ಮೀ. ನಂತರ ಅವರ ಜೊತೆಗೂಡಿದ ಈ ನಂಬಿಗಸ್ಥ ನಾಯಿ ಒಟ್ಟು 17 ದಿನಗಳ ಕಾಲ ನವೀನ್ ಜೊತೆ ನಡೆದು ದಾಖಲೆ ಸ್ಥಾಪಿಸಿ ಈಗ ನವೀನ್ ಮನೆಯಲ್ಲಿ ಸ್ಥಾನ ಪಡೆದಿದೆಯಂತೆ.




ಇದು ಜಗತ್ತಿನ ಅತ್ಯಂತ ವೇಗವಾಗಿ ಚಲಿಸುವ ಮೊಬೈಲ್ ಹಾಸಿಗೆಯಂತೆ. ಗಂಟೆಗೆ 83.8 ಮೈಲು ವೇಗದಲ್ಲಿ ಚಲಿಸಿ ದಾಖಲೆ ನಿರ್ಮಿಸಿದೆಯಂತೆ. ಯುಎಇನಲ್ಲಿ ಹೊಟೇಲ್ ಬುಕಿಂಗ್ ವೆಬ್‌ಸೈಟ್ ಒಂದು ಕಾರಿನ ಎಂಜಿನ್‌ಗೆ ಇದನ್ನು ಜೋಡಿಸಿ ಪ್ರಚಾರ ಆರಂಭಿಸಿದೆ. ಪ್ರಚಾರಕ್ಕೆ ಮಾತ್ರ ಎಂಬ ಸುದ್ದಿ ಕೇಳಿ ಸೋಮಾರಿಗಳ ಕನಸಿಗೆ ಕನ್ನ ಬಿದ್ದಿರಬಹುದು.

ಪೊಕೆಟ್ ಡಯಲಿಂಗ್ ಗೊತ್ತಲ್ಲ. ಮೊಬೈಲ್ ಜೇಬಿಗೆ ಒತ್ತಿ ಯಾರ್ಯಾರಿಗೋ ಕರೆ ಹೋಗುವುದು. ಅಮೆರಿಕಾದಲ್ಲಿ ಇಬ್ಬರು ದರೋಡೆಕೋರರು ಉಪಾಹಾರಗೃಹದಲ್ಲಿ ಆರಾಮವಾಗಿ ದರೋಡೆಯ ಸ್ಕೆಚ್ ಹಾಕುತ್ತ ಕೂತಿದ್ದರಂತೆ. ಈ ಪೊಕೆಟ್ ಪೊಲೀಸ್ ಹೆಲ್ಪ್‌ಲೈನ್ ಕೊಠಡಿಗೆ ಡಯಲ್ ಮಾಡಿದೆ. ಪೊಲೀಸರೂ ಅಷ್ಟೇ ಆರಾಮವಾಗಿ ವಿವರ ಪಡೆದು ದರೋಡೆ ಸ್ಥಳದಲ್ಲಿ ಕಾದಿದ್ದ ಅವರ ಸಹಚರರನ್ನು ಬಂಧಿಸಿದರಂತೆ. ದರೋಡೆಕೋರರು ಯಾಕೆ ಶತ್ರುವಿನ ನಂಬರ್ ಅನ್ನು ಫ್ರೆಂಡ್ಸ್‌ಲಿಸ್ಟ್‌ನಲ್ಲಿ ಸೇರಿಸಿದ್ದರೋ!